


# ವಿಮಲಕೀರ್ತಿ ಎಂಬ ನಿತ್ಯಜ್ಞಾನಿ.

ಸುರೇಶ್ ನಾಗಲಮಡಿಕೆ.[1]

Article Link: https://aksharasurya.com/2023/10/suresh-nagalamadike/

ಭಾರತೀಯ ತತ್ವಜ್ಞಾನದ ಜಾಡಿನಲ್ಲಿ 'ಸಂವಾದ' ಪರಂಪರೆಗೊಂದು ವಿಶಿಷ್ಟವಾದ ಜಾಗವಿದೆ. ಸಂವಾದಗಳಿಂದಲೇ, ತತ್ವಜ್ಞಾನದ ಹಲ ಬಗೆಯ ಪರಿಕಲ್ಪನೆಗಳು ಹುಟ್ಟಿವೆ; ವಿಸ್ತಾರಗೊಂಡಿವೆ. ಉಪನಿಷತ್ತುಗಳಿಂದ ಕಾಣಸಿಗುವ ಬ್ರಹ್ಮತತ್ವ, ಜ್ಞಾನ, ಆತ್ಮ, ಮೋಕ್ಷ, ಧರ್ಮ, ಈಶ್ವರ ಮುಂತಾದ ವಿಚಾರಗಳು ಸಂವಾದರೂಪದಲ್ಲೇ ಹೆಚ್ಚು ವ್ಯಾಪ್ತಿಯನ್ನು ಧರಿಸಿವೆ. ಮಾತ್ರವಲ್ಲ, ಮುಂದೆ ಹುಟ್ಟುವ ಪಂಥಗಳಿಗೆ 'ಬೇರೇತನ'ದ ಆಲೋಚನೆಗಳಿಗೆ ದಾರಿಮಾಡಿಕೊಟ್ಟಿವೆ. ಬುದ್ಧನಾಗಲೀ, ಈಗ ಚರ್ಚೆಗೆ ಒಳಗಾಗಿರುವ ವಿಮಲಕೀರ್ತಿಯಾಗಲೀ ತಮ್ಮ ಅನುಭವಕ್ಕೆ ಎಟುಕಿದ ಜ್ಞಾನ ಒಂದು ಸ್ವರೂಪದ್ದಾಗಿದ್ದರೇ, ಪರಸ್ಪರ ಸಂವಾದದಿಂದ ಕಂಡುಕೊಂಡ ಜ್ಞಾನವು ಬೇರೊಂದು ಸ್ವರೂಪದ್ದಾಗಿದೆ. ಇವರ ನಂತರ ನಮಗೆ ತಿಳಿಯುವ ಜ್ಞಾನ ಮತ್ತು ಅದರ ಮೂಲಕ ಅನಾವರಣಗೊಂಡ ಲೋಕವಿವರಣೆಗಳು ದಕ್ಕಿರುವುದು ಸಂವಾದ ನಂತರದ ಸ್ಥಿತಿಯಿಂದಲೇ ಎನ್ನಬಹುದು. ಯಾವುದೇ ತತ್ವಜ್ಞನಿಗೆ ಜಿಜ್ಞಾಸೆಯಿಲ್ಲದೇ ಉತ್ತರಗಳ ಹುಡುಕಾಟ ಕಡುಕಷ್ಟ. ಆ ಬಗೆಯ ಜಿಜ್ಞಾಸೆಗಳನ್ನು ತಿಳಿಗೊಳಿಸುವ ಮಾರ್ಗವೆಂದರೆ, ಪರಸ್ಪರ ಸಂವಾದ. ಪ್ರಖರವಾದ ಸಂವಾದಗಳು ವೇದ, ಉಪನಿಷತ್ತುಗಳಿಂದಲೇ ಲಭ್ಯವಾಗುತ್ತವೆ. ಭೃಗು–ವರಣ, ಶ್ವೇತುಕೇತು–ಉದ್ದಾಲಕ, ನಚಿಕೇತ–ಯಮ, ಯಾಜ್ಞವಲ್ಕ್ಯ ಮತ್ತು ಆತನ ಮಡದಿಯರು, ಲೋಕಾಯತರು, ಪಾಷಂಡಿಗಳು ಮುಂತಾದವರ ಮಾತು–ಕತೆಗಳು ಭಾರತೀಯ ತಾತ್ವಿಕ ಚಿಂತನೆಗಳನ್ನು ಮಾಗಿಸಿವೆ. ಇವುಗಳಲ್ಲಿ ನಾವು ಭಿನ್ನಾಭಿಪ್ರಾಯಗಳನ್ನು ಕಂಡರೂ, ಅವರ ಜ್ಞಾನದ ಆಯಾಮಗಳನ್ನು ತಿಳಿಯಬಹುದು. ಎಷ್ಟೋ ಸಂದರ್ಭಗಳಲ್ಲಿ ಲೋಕಾಯತ, ಚಾರ್ವಾಕ ತತ್ವಗಳನ್ನು ತೀರ ನಿರಾಕರಣೆಯ ದೃಷ್ಟಿಯಿಂದ ನೋಡಲಾಗಿದೆ. ಭಾರತೀಯ ದರ್ಶನಗಳಿಂದ ಆಚೆ ಇಡುವ ಹುನ್ನಾರಗಳು ನಡೆದಿವೆ. ಆದರೆ, ಅವರಲ್ಲೂ ಅಹಿಂಸೆಯ ಲೋಕವಿವರಣೆಗಳನ್ನು ಹುಡುಕಬಹುದು. ಇವರು ನಾಸ್ತಿಕವಾದಿಗಳಾದರೂ ತಮ್ಮದೇ ವಿಚಾರ ಜಗತ್ತಿನ

1. ವಿಮರ್ಶಕರು ಮತ್ತು ಸಹಾಯಕ ಪ್ರಧ್ಯಾಪಕರು, ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು.

ವ್ಯಾಖ್ಯಾನಗಳನ್ನು ಹೊಂದಿದ್ದರು. ವೇದಗಳಲ್ಲಿ ಚಾರ್ವಾಕವೆಂಬ ಹೆಸರು ಇಲ್ಲವೆಂದು, ವೇದಗಳ ನಂತರ ಸಾಹಿತ್ಯದಲ್ಲಿ ಹೆಚ್ಚು ಕಾಣಸಿಗುತ್ತೆಂದು ಹೇಳುತ್ತಾರೆ. ವೇದಗಳಲ್ಲಿ ಭೌತವಾದದ ಸೂಚನೆಗಳಿದ್ದರೂ, ಅದಕ್ಕೆ ವಿಸ್ತಾರತೆಯನ್ನು ದೊರಕಿಸಿಕೊಟ್ಟವರು ಇವರೆ ಎಂಬುದನ್ನು ನಂತರದ ಅಧ್ಯಯನಗಳು ತಿಳಿಸಿವೆ. ಜಾಬಾಲನಂತ ಚಾರ್ವಾಕರಿಂದ ಪರಲೋಕವಿಲ್ಲ ಎಂಬ ವಿವರಣೆಗಳು ಸಿಗುತ್ತವೆ. ಅಲ್ಲದೇ ಮಹಾಭಾತರದಲ್ಲಿ ನಡೆದ ಯುದ್ಧದ ನಶ್ವರತೆಯನ್ನು ಹೇಳಿ, ಅಹಿಂಸೆಯನ್ನು ಎತ್ತಿಹಿಡಿಯುವ ಚಾರ್ವಕರನ್ನು ಕಾಣಲಾಗಿದೆ. ಆದರೆ, ಇವರೆಲ್ಲ ಬೌದ್ಧ, ಜೈನ, ವೈದಿಕರಿಂದ ಸಾಕಷ್ಟು ತಕರಾರುಗಳಿಗೆ ಒಳಗಾಗಿದ್ದಾರೆ. ಈ ವಿಚಾರವನ್ನು ತಂದಿದ್ದು ಭಾರತೀಯ ತತ್ವಪರಂಪರೆಗೆ ಇವರ ಕೊಡುಗೆಯೂ ಇದೆ ಎಂದು ಹೇಳಲಿಕ್ಕೆ. ಇವರೆಲ್ಲರನ್ನು ಒಳಗೊಂಡ ತತ್ವಜಗತ್ತು ಬಹುರೂಪತೆಯನ್ನು ತೋರಿಸುತ್ತದೆ ಹೊರೆತು, ಏಕರೂಪತೆಯನ್ನಲ್ಲ. ಲೋಕ ಮತ್ತು ಜೀವಿ ಇವುಗಳ ಸಂಬಂಧಗಳನ್ನು ವಿವರಿಸಲು ಇವರ ದಾರಿಗಳು ಭಿನ್ನವಾಗಿವೆ. ಹಲವು ಬಾರಿ ಕಟ್ಟಿರುವ ರಚನೆಗಳು ಕ್ರಮೇಣ ಪುನರ್ ವ್ಯಾಖ್ಯಾನಕ್ಕೆ ಒಳಗಾಗಿವೆ. ದೇಹ ಮತ್ತು ಆತ್ಮದ ಬಗ್ಗೆ ಉಪನಿಷುತ್ತುಗಳು ಹೆಚ್ಚು ಪ್ರಮಾಣದಲ್ಲೇ ಶೋಧಿಸಿವೆ. ಆದರೆ, ಇವು ಒಳಗೊಂಡ ಜನರು ಯಾರಾಗಿದ್ದರು? ಎಂಬ ಬಗ್ಗೆ ಹಲವರಿಗೆ ತೀವ್ರ ಸಂಶಯಗಳಿವೆ. ಈ ಕುರಿತು ಅವುಗಳಲ್ಲಿ ಕೆಲ ಮಟ್ಟಿಗೆ ಉತ್ತರಗಳಿವೆ. ಬೌದ್ಧ ದರ್ಶನಗಳ ಕೊಡುಗೆ ಮತ್ತು ಅವುಗಳ ಸ್ವಂತಿಕೆ ಅರಿಯಲು ಆರಂಭದಲ್ಲಿ ಹುಟ್ಟಿಕೊಂಡ ದರ್ಶನಗಳ ಪರಿಚಯವಿಲ್ಲದೇ ನಾವು ಮುಂದಿನ ಹೆಜ್ಜೆಗಳನ್ನು ಕಾಣಲು ಅಸಾಧ್ಯ. ವಿಮಲಕೀರ್ತಿಯನ್ನು ಕೂಡ. ಒಂದು ಕಾಲಮಾನದಲ್ಲಿ ಜ್ಞಾನ ಯಾರಿಗೆ ದಕ್ಕುತ್ತದೆ? ಎಂಬ ಪ್ರಶ್ನೆಗಳು ತೀವ್ರವಾಗಿದ್ದರಿಂದಲೂ ವಜ್ರಸೂಚಿ ಉಪನಿಷತ್ತು ಆ ಬಗೆಯ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ನೀಡಿದೆ. ಜ್ಞಾನವನ್ನು ಪಡೆಯಬಹುದಾದ ಮನುಷ್ಯ ಮತ್ತು ಬ್ರಹ್ಮತ್ವವನ್ನು ದಕ್ಕಿಸಿಕೊಳ್ಳುವ ಮನುಷ್ಯರು ಒಂದು 'ವರ್ಣ'ಕ್ಕೆ ಸೇರಬೇಕು ಎಂಬ ನಿಯಮವನ್ನು ಮೇಲಿನ ಉಪನಿಷತ್ತು ಪ್ರಶ್ನಿಸುತ್ತದೆ. ಬ್ರಹ್ಮತ್ವ ಏನಿದ್ದರೂ ಜ್ಞಾನದ ಪರಮಸ್ಥಿತಿಯೇ. ಇದನ್ನು ಪಡೆಯಬೇಕಾದರೇ ವ್ಯಕ್ತಿಯ ಮನಸ್ಸಿನ ಏಕಾಗ್ರತೆ ಹಾಗು ವಿವೇಕ ಮುನ್ನೆಲೆಗೆ ಬಂತು. ಆದರೆ, ವೇದಾಂತವೇ ಭಾರತೀಯ ತತ್ವಶಾಸ್ತ್ರದ ಬುನಾದಿ ಎಂದು ಭಾವಿಸುವ ಮನಸ್ಸುಗಳು ಅಧಿಕವಾಗಿ, ಹಲವು ಬಾರಿ ಸಂವಾದವನ್ನು ತುಂಡರಿಸಲಾಯಿತು. ವೇದಾಂತದ ಜೊಳ್ಳನ್ನು ಹಿಡಿದು ಸಾಗಿದ ಅನೇಕರು ವರ್ಣಗಳ ತಳಹದಿಯನ್ನು ಮೇಲೆತ್ತಲು ತವಕಪಟ್ಟರು. ಇಂತಹ ಸಂದರ್ಭದಲ್ಲಿ ಲೋಕಾಯತರು, ಬೌದ್ಧರು, ಜೈನರು ತಮ್ಮ ವಾದಗಳನ್ನು ಮುಂದಿಟ್ಟರು. ವಾಸ್ತವವಾಗಿ ಇವರ ಮುಂದಿದ್ದ ಬಹುದೊಡ್ಡ ಸವಾಲು, ತಮ್ಮ

ತತ್ವಗಳನ್ನು ಸಾಮಾಜಿಕ ವಲಯಕ್ಕೆ ದಾಟಿಸುವುದರಲ್ಲಿ. ಇತರ ದರ್ಶನಗಳಲ್ಲಿ ಅಡಗಿದ್ದ ಭೌತವಾದವನ್ನು ಎಷ್ಟರ ಮಟ್ಟಿಗೆ ಸ್ವೀಕರಿಸಬೇಕು? ಅಧ್ಯಾತ್ಮವಾದವನ್ನು ಹೇಗೆ ಮುರಿದುಕಟ್ಟಬೇಕು? ಎಂಬುದರಲ್ಲಿ. ಬುದ್ಧನ ಆರ್ಯಸತ್ಯಗಳ ಹುಡುಕಾಟವೂ ಕೂಡ ಇದೇ ದಾರಿಯಲ್ಲಿದೆ. ಅಂದರೆ, ಬುದ್ಧನ ತತ್ವಲೋಕದಲ್ಲಿ ಅಡಗಿದ ಕರುಣೆ, ಮೈತ್ರಿಗಳು ಅದುವರೆಗಿದ್ದ ಆತ್ಮ ಮತ್ತು ಬ್ರಹ್ಮತ್ವಗಳ ಶೊಧನೆ ಮತ್ತು ಸಾಧನೆಗಳನ್ನು ಕೊಂಚ ಬೇರೆ ಮಾರ್ಗದಲ್ಲಿ ನೋಡುವಂತೆ ಮಾಡಿದವು. ಈತನ ಬಹುಮುಖ್ಯ ಕೊಡುಗೆ ಇರುವುದೇ ಮನುಷ್ಯ ಮತ್ತು ನಿಸರ್ಗಕ್ಕೆ ಇರುವ ಸಂಬಂಧ ಹಾಗು ಮನುಷ್ಯನಿಗೂ ಮನಸ್ಸಿಗೂ ಇರುವ ಕಂದಕ ಮತ್ತು ಸಮ್ಮಿಲನಗಳಲ್ಲಿ. ಜೊತೆಗೆ ಸಾಂಖ್ಯತತ್ವವನ್ನು ಮತ್ತಷ್ಟು 'ಮನಸ್ಸಿನ' ದಾರಿಗಳಿಗೆ ಒಗ್ಗಿಸಿಕೊಳ್ಳುವಲ್ಲಿ ಈತನ ಸ್ವಂತಿಕೆ ಇದೆ. ಎಷ್ಟೋವೇಳೆ ದ್ವಂದ್ವವನ್ನು ಸಾಂಖ್ಯ ಅನುಸರಿಸುತ್ತದೆ ಎಂದೆನಿಸಿದರೂ, ದ್ವಂದ್ವವೇ ಸಂಗಮವಾಗಿ ಕಾಣುವ ಸ್ವರೂಪಗಳು ಅಲ್ಲಿ ಕಾಣಸಿಗುತ್ತವೆ.

ಬುದ್ಧನ ಸಮಕಾಲೀನ ಸಂದರ್ಭ ಮತ್ತು ನಂತರದ ಕಾಲಮಾನದಲ್ಲಿ ಹಲ ಬಗೆಯ ದಾರ್ಶನಿಕತೆಗಳು ಬೆಳಕಿಗೆ ಬಂದವು. ಈ ನಿಟ್ಟಿನಲ್ಲಿ ಬೌದ್ಧ ತತ್ವಗಳಿಗೂ ಸಾಕಷ್ಟು ಸವಾಲುಗಳು, ಬಿಕ್ಕಟ್ಟುಗಳು ಎದುರಾದವು. 'ಹೀನಯಾನ' ಮತ್ತು 'ಮಹಾಯಾನ'ಗಳು ತಕ್ಕ ವಾದಗಳನ್ನು ಮಂಡಿಸಿದವು. ವೈಭಾಷಿಕರು ಮತ್ತು ಸೌತ್ರಾಂತಿಕ ದರ್ಶನಗಳು ಹೀನಯಾನದಲ್ಲಿ ಗುರುತಿಸಿಕೊಂಡರೇ, ಯೋಗಾಚಾರ ಮತ್ತು ಮಾಧ್ಯಮಿಕ ದರ್ಶನಗಳು ಮಹಾಯಾನದಲ್ಲಿ ಕಂಡುಬಂದವು. ಮಾಧ್ಯಮಿಕ ತತ್ವವನ್ನು ವಿಶ್ವವ್ಯಾಪಿಗೊಳಿಸಿದವನು ನಾಗಾರ್ಜುನ. ವಿಮಲಕೀರ್ತಿಯ 'ನಿರ್ದೇಶ ಸೂತ್ರ'ವನ್ನು ಓದಿದ ಮೇಲೆ ಮಹಾಯಾನದ ತತ್ವಗಳ ಸ್ವರೂಪಗಳು ಮತ್ತಷ್ಟು ಅರಿವಾಗುತ್ತವೆ. ವಾಸ್ತವವಾಗಿ ಬಿಡುಗಡೆಯ ಮಾರ್ಗವನ್ನು ಹೀನಯಾನ ತೀರ ಸಂಕುಚಿತ ನಿಲವನ್ನು ವ್ಯಕ್ತಪಡಿಸುತ್ತದೆ. ವೈಯಕ್ತಿಕ ಬಿಡುಗಡೆಗೆ ಮಾತ್ರ ಇದು ಹಾತೊರೆಯುತ್ತದೆ. ಆದರೆ, ಮಹಾಯಾನ ಒಂದು ರೀತಿಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಪರಿಯದು. ಮನುಷ್ಯ ತಾನು ಮಾತ್ರ ಬಿಡುಗಡೆಗೊಂಡರೆ ಸಾಲದು ಸಕಲ ಜೀವಿಗಳ ಮುಕ್ತತೆಗೂ ಶ್ರಮಪಡಬೇಕು ಎನ್ನುತ್ತದೆ. ಈ ಬಗೆಯ ಸಕಲ ಜೀವಗಳ ಸಮಾನತಾ ತತ್ವವನ್ನು ಬುದ್ದನ ದಾರಿಯಲ್ಲಿ ಮತ್ತಷ್ಟು ವಿಶಾಲಗೊಳಿಸಿದವನು ವಿಮಲಕೀರ್ತಿ. ಬೌದ್ಧದಮ್ಮದ ದೊಡ್ಡ ತಾತ್ವಿಕತೆ ಎಂದರೆ ಸಕಲಜೀವಗಳನ್ನು ಒಳಗೊಳ್ಳುವುದು. ವಿಮಲಕೀರ್ತಿ ತನ್ನ 'ನಿರ್ದೇಶ ಸೂತ್ರದ' ಪ್ರಕಾರ ಬುದ್ಧನ ಸರೀಕ. ಈತನ ಕುರಿತು ಚಾರಿತ್ರಿಕ ಸಂಗತಿಗಳು ಅಸ್ಪಷ್ಟವಾಗಿವೆ. ಬೌದ್ಧ ಧರ್ಮ ಚೀನಾ ಮತ್ತು ಇನ್ನಿತರ ಏಷ್ಯಾದ ಪ್ರದೇಶಗಳಿಗೆ ತಲುಪಿದ್ದು ದೊಡ್ಡ ಸಂಗತಿ. ಆರಂಭದಲ್ಲಿ ಕುಶಾನರ ಕಾನಿಷ್ಕನೂ ಇದಕ್ಕೆ ಕಾರಣ. ಚೀನಾದ ಬೌದ್ಧ

ತಾತ್ವಿಕತೆಗಳು ಅಲ್ಲಿನ ಇತರ ಪಂಥಗಳ ಜೊತೆ ಸಮ್ಮಿಲನಗೊಂಡಿದ್ದು ಮತ್ತು ಕೆಲ ಬಾರಿ ಸಂಘರ್ಷಕ್ಕೂ ಇಳಿದಿದ್ದೂ ಚರಿತ್ರೆ. ಕಾನಿಷ್ಕನ ಒತ್ತಾಯ ಮತ್ತು ಬೇಡಿಕೆಯಂತೆ ಕಶ್ಯಪನು ಚೀನಾದಲ್ಲಿ ಬೌದ್ಧ ತತ್ವಗಳನ್ನು ಪ್ರಚಾರ ಮಾಡಿದ ಎಂಬ ಅಭಿಪ್ರಾಯಗಳು ಇವೆ. ಮತ್ತೊಂದು ಕಡೆ, ಕ್ರಿ.ಶ. ಒಂದನೇ ಶತಮಾನದಲ್ಲಿ ಬೌದ್ಧ ದರ್ಶನಗಳ ಗ್ರಂಥಗಳು ಚೀನೀ ಭಾಷೆಗೆ ಹೋದವು ಎಂಬ ಮಾತುಗಳಿವೆ. ನಂತರದಲ್ಲಿ ಕುಮಾರಜೀವ ಎಂಬ ಸನ್ಯಾಸಿ ಅನೇಕ ಬೌದ್ಧ ಗ್ರಂಥಗಳನ್ನು ಭಾಷಾಂತರ ಮಾಡಿದ. ಇಂತಹ ಕೃತಿಗಳಲ್ಲಿ ವಿಮಲಕೀರ್ತಿಯ ಸೂತ್ರಗಳು ಸೇರಿಕೊಂಡಿವೆ. ಜಿಯು ಮೋ ಲುವೋಶಿ ಎಂಬುದು ಕುಮಾರಜೀವನ ಚೀನಿ ಹೆಸರು. ಸದ್ಯ ವಿಮಲನ ಸೂತ್ರಗಳು ರೂಪಕಾತ್ಮಕವಾಗಿ ಕನ್ನಡದಲ್ಲಿ ದಕ್ಕುತ್ತಿರುವುದು ಮಹೇಶ ಹರವೆಯವ–ರಿಂದ. ವಿಮಲಕೀರ್ತೀಯ ಸಂವಾದ ಸೂತ್ರಗಳು ಇಡಿಯಾಗಿ ನನ್ನ ಕಣ್ಣಿಗೆ ಬಿದ್ದಿಲ್ಲ. ನಟರಾಜ ಬೂದಾಳು ಅವರು ಅಲ್ಲಮನ ಜೊತೆಯಲ್ಲಿ ವಿಮಲಕೀರ್ತಿಯ ಕೆಲ ಸೂತ್ರಗಳನ್ನಿಟ್ಟು ಚರ್ಚೆ ಮಾಡಿದ್ದಾರೆ. ಓಶೋ ವಿಮಲಕೀರ್ತಿಯನ್ನು ಬುದ್ಧನ ಸಮಕಾಲೀನನೆಂದೇ ಗುರುತಿಸುತ್ತಾರೆ. (ವಾಸುದೇವಮೂರ್ತಿ ಅವರ ಬುದ್ಧ ಪರಂಪರೆಯ ಅನುವಾದ ಪುಸ್ತಕ). ಮಿಕ್ಕಂತೆ ಈತನ ಕುರಿತು ಇಂಗ್ಲೀಷ್ ಕೃತಿಗಳನ್ನೇ ಆಶ್ರಯಿಸಬೇಕಾಗುತ್ತದೆ. ಹರವೆ ಈ ಕೃತಿಯ ಮೂಲಕ ದೊಡ್ಡ ಖಾಲಿ ಜಾಗವನ್ನು ತುಂಬಿದ್ದಾರೆ. ವಿಮಲಕೀರ್ತಿಯ ಮುಖೇನ ಕನ್ನಡ ಸಾಧಕ ಪರಂಪರೆಗೆ ಸೇರಬಹುದಾದ ಅಲ್ಲಮ, ಸಿದ್ದರಾಮ, ಕನಕ, ಮಂಟೇಸ್ವಾಮಿ ಮುಂತಾದವರ ಜೊತೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ನಿರ್ದೇಶ ಸೂತ್ರದಲ್ಲಿ ಅಡಗಿದ ಸಾಹಿತ್ಯ ಶ್ರೇಷ್ಠತೆಯನ್ನು ಹರವೆ ಗಂಭೀರವಾಗಿ ಗ್ರಹಿಸಿ, ಅಷ್ಟೇ ರೂಪಕ ಭಾಷೆಯಲ್ಲಿ ತಂದಿದ್ದಾರೆ. ಸಾಹಿತ್ಯದ ಕೊಳಲು ಮತ್ತು ದಾರ್ಶನಿಕತೆಯ ಗಾನ ಎರಡನ್ನು ವಿಮಲಕೀರ್ತಿಯಲ್ಲಿ ಕಾಣಬಹುದು. ಇದೇ ಅನುಭವವನ್ನು ಹರವೆ ಕನ್ನಡದಲ್ಲಿ ತರಲು ಯತ್ನಿಸಿದ್ದಾರೆ. ವಿಮಲಕೀರ್ತಿ ಸದ್ಯಕ್ಕೆ ಬುದ್ಧಕಾಲೀನ ಗೃಹಸ್ಥ ಮತ್ತು ದಾರ್ಶನಿಕ. ಬುದ್ಧನ ಅನೇಕ ಅನುಯಾಯಿಗಳು ವಿಮಲಕೀರ್ತಿಯನ್ನು ಎದುರುಗೊಂಡಿದ್ದಾರೆ. ಅವರ ಸಂವಾದದಲ್ಲಿ ಅನೇಕ ಬಗೆಯ ಬೌದ್ಧ ತತ್ವಗಳು ವಿಸ್ತಾರಗೊಂಡಿವೆ. ಆದರೆ, ವಿಮಲಕೀರ್ತಿಯ ಸ್ವಂತಿಕೆಯ ದಾರ್ಶನಿಕತೆ ಕಂಡುಬರುವುದು ಎಲ್ಲಿ? ಅವನ ಮಾತುಗಳು ಅದುವರೆಗಿನ ಮಹಾಯಾನಕ್ಕಿಂತ ಭಿನ್ನವೋ ಅಥವ ಪೂರಕವೋ? ವಿಮಲಕೀರ್ತಿ ಬುದ್ಧನ ಅನುಯಾಯಿಗಳ ಮಾತುಗಳನ್ನು ಏಕೆ ಒಪ್ಪುವುದಿಲ್ಲ? ಬುದ್ಧಕಾಲೀನ ತತ್ವಗಳು ಜನರನ್ನು ಎದುರುಗೊಳ್ಳುತ್ತಿದ್ದ ಬಗೆ ಹೇಗೆ? ಶ್ರೀಸಾಮಾನ್ಯನ ಬದುಕಿಗೆ ವಿಮಲಕೀರ್ತಿ ತತ್ವಗಳು ಏಕೆ ಹತ್ತಿರವಾಗಿವೆ? ನೇರವಾಗಿ ಬುದ್ಧ ಹೇಳುವ ಬೋಧನೆಗೂ, ಆತನ

ಶಿಷ್ಯರು ಹೇಳುತ್ತಿದ್ದ ವಿಧಾನಗಳಿಗೂ ವ್ಯತ್ಯಾಸಗಳಿದ್ದವೇ? ಇತ್ಯಾದಿ ಪ್ರಶ್ನೆಗಳನ್ನು ಕೇಳದೇ ಹೋದರೆ ನಿರ್ದೇಶ ಸೂತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರೆವು. ವಿಮಲಕೀರ್ತಿ ಬೌದ್ಧದಮ್ಮದಲ್ಲಿ ಇದ್ದೂ ಇಲ್ಲದಂತೆ ಇದ್ದವ. ಹಾಗಾಗಿಯೆ ಆತ ಅವರ ನಡೆ–ನುಡಿಗಳನ್ನು ಪರೀಕ್ಷಿಸುತ್ತಾನೆ. ಬುದ್ಧನನ್ನಾಗಲೀ, ಆತನ ಶಿಷ್ಯರನ್ನು ಕುರುಡು ರೀತಿಯಲ್ಲಿ ಒಪ್ಪಿಕೊಂಡರೇ, ವಿಮಲ ನಮಗೆ ಅಷ್ಟಾಗಿ ಹತ್ತಿರವಾಗಲಾರ. ಧ್ಯಾನ, ನಿರ್ವಾಣ, ಜ್ಞಾನ, ವೈರಾಗ್ಯ, ರೋಗ, ದುಃಖ, ದಮ್ಮ ಮುಂತಾದ ತಾತ್ವಿಕ ವಿಚಾರಗಳನ್ನು ವಿಮಲಕೀರ್ತಿ ಕೈಯಲ್ಲಿ ಮತ್ತಷ್ಟು ಪ್ರಬುದ್ಧಗೊಂಡಿವೆ. ಈ ಸಂವಾದವು ದ್ವಂದ್ವವಾದವನ್ನು ಬೇರೊಂದು ರೀತಿಯಲ್ಲಿ ಕಂಡಿದೆ. ಮೂರ್ತಸ್ಥಿತಿಯನ್ನು ದ್ವಂದ್ವತೆಯ ಮಾದರಿಯಲ್ಲಿ ನೋಡದೇ ಹೋಗಿದೆ. ವಿಮಲನ ಮಾನಸಿಕಲೋಕ ಸದಾ ಸಾಮಾನ್ಯ ವ್ಯಕ್ತಿಯನ್ನು ಕೇಂದ್ರೀಕರಿಸಿದ್ದರಿಂದಲೇ ಏನೋ ಪದೇ ಪದೇ ಅವನ ಮಾತುಗಳು ಇಹದ ಹಾದಿಯನ್ನು ಸುಗಮಗೊಳಿಸಿವೆ. ಹಾಗಾಗಿಯೇ ಹಲವು ಕಡೆ ಆತನ ತತ್ವಗಳು 'ವಚನ'ಗಳಾಗಿ ಮಾರ್ಪಟ್ಟು, ಬೊಧನೆಯ ಹಂತಕ್ಕೆ ತಿರುಗಿವೆ. ದೈನಂದಿನ ಲೋಕದಲ್ಲೇ ಇದ್ದು ಅತೀತವಾದ ಆನಂದವನ್ನು ಪಡೆಯಬಹುದೇ ಎಂಬುದಕ್ಕೆ ಅವನ ಸೂತ್ರಗಳಲ್ಲಿ ಹುಡುಕಾಟವಿದೆ. 'ನಿರ್ವಾಣ' ಮತ್ತು 'ಸಂಸಾರ' ಇವುಗಳ ಸಾಮರಸ್ಯವಾದರೂ ಹೇಗೆ? ಎಂಬುದಕ್ಕೂ ವಿಮಲನ ಜಿಜ್ಞಾಸೆ ಅಡಗಿದೆ.

ಭಾರತದ ದೊಡ್ಡ ವಿದ್ವಾಂಸರಾದ ಗೋಪಿನಾಥ ಕವಿರಾಜರು ಪ್ರಾಚೀನ ಬೌದ್ಧವು ಪ್ರಮುಖವಾಗಿ ಮೂರು ಆದರ್ಶಗಳನ್ನು ಹೊಂದಿದ್ದವು ಎಂದು ಅಭಿಪ್ರಾಯ ಪಡುತ್ತಾರೆ. ಅವುಗಳು, ಶ್ರಾವಕ, ಪ್ರತ್ಯೇಕ ಬುದ್ಧ ಮತ್ತು ಸಮ್ಯಕ್–ಸಂಬುದ್ಧ. ಶ್ರಾವಕರು ಜ್ಞಾನಕ್ಕಾಗಿ ಬೇರೆಯವರನ್ನು ಆಶ್ರಯಿಸಬೇಕಾಗಿತ್ತು. ಪ್ರತ್ಯೇಕಬುದ್ಧರು ಜ್ಞಾನಕ್ಕಾಗಿ ಬೇರೆಯವರನ್ನು ಆಶ್ರಯಿಸಬೇಕಾಗಿಲ್ಲ. ಇವರು ಕೇವಲ ತಮ್ಮ ಬುದ್ಧತ್ವಕ್ಕಾಗಿ ಹಾತೊರೆಯುವರು. ಇನ್ನೂ ಸಮ್ಯಕ್–ಬುದ್ಧನನ್ನು ಬುದ್ಧ ಭಗವಾನ ಎಂದೇ ಗೋಪಿನಾಥರು ಗುರುತಿಸಿತ್ತಾರೆ. ಜಗತ್ತಿನ ಕಲ್ಯಾಣದ ಭಾವನೆಯೇ ಇವನಿಗೆ ಮೂಲಾಧಾರ. ಇಲ್ಲಿ ಜ್ಞಾನ ಮತ್ತು ಕರುಣೆ ಇರುತ್ತವೆ. ಇವುಗಳ ಮೂಲಕವೇ ಕವಿರಾಜರು ಬೌದ್ಧ ತಾತ್ವಿಕತೆಯನ್ನು ಚರ್ಚೆ ಮಾಡುತ್ತಾರೆ. ಇವರ ವಾದವನ್ನು ಹಿಡಿದು ಸಾಗಿದರೇ ವಿಮಲಕೀರ್ತಿ ಕರುಣೆ ಮತ್ತು ಜ್ಞಾನಕ್ಕೆ ಹೆಚ್ಚು ಒತ್ತುಕೊಟ್ಟವನು. ಅಂದರೆ, ಮೂರನೇ ವಿಚಾರದ ಆಧಾರದಲ್ಲಿ ನಿಂತುಕೊಳ್ಳುತ್ತಾನೆ. ವಾಸ್ತವವಾಗಿ ಮಹಾಯಾನಿ ಯಾದವನಿಗೆ ಲೋಕವನ್ನು ಕಟ್ಟುವ ಮಾದರಿ ತಿಳಿದಿರಬೇಕು. ಬೌದ್ಧರಲ್ಲಿ ಎಷ್ಟೇ ಭಿನ್ನವಾದ ವಾದಗಳಿದ್ದರೂ, ಲೋಕಕಲ್ಯಾಣದ ವಿಚಾರವೇ ಮುಂದೆ ಬರುತ್ತದೆ. ಹಾಗೆ ನೋಡಿದರೇ ವಿಮಲಕೀರ್ತಿ ಪ್ರತ್ಯೇಕ ಬುದ್ಧನಲ್ಲ. ಸಕಲಜೀವಿಗಳ ಪೂರ್ಣತ್ವಕ್ಕೆ ಹಾತೊರೆಯುವ ಪಾರಮಿತ ತತ್ವಕ್ಕೆ ಸೇರುತ್ತಾನೆ.

ಆತನ ಪ್ರತಿ ಮಾತುಗಳಲ್ಲಿ ಎಲ್ಲವನ್ನು ಒಟ್ಟುಗೂಡಿಸುವುದು ಮತ್ತು ತನ್ನನ್ನು ತಾನು ಅರಿಯುವುದೇ ಗೋಚರಿಸುತ್ತದೆ. ಇಷ್ಟಕ್ಕೂ ವಿಮಲ ನಡೆಸುವ ಸಂವಾದವು ಕಡಿಮೆ ಜ್ಞಾನವುಳ್ಳ ಸಾಧಕರ ಜೊತೆ ಜರುಗುವುದಿಲ್ಲ. ಬುದ್ಧನ ಸಮಕಾಲೀನರಾದ ಸಾರೀಪುತ್ತ, ಮೊಗ್ಗಲಾಯನ, ಆನಂದ, ಮಂಜುಶ್ರೀ, ಮಹಾಕಾತ್ಯಯನ, ರಾಹುಲ, ಪೂರ್ಣಮೈತ್ರೇಯ ಮುಂತಾದವರ ಸಂಗಡವೇ ಆತನ ಸಂವಾದ ಸಾಗುತ್ತದೆ. ಹಲವು ಬಾರಿ ವಿಮಲನ ಮಾತುಗಳು ನಡೆಗೆಟ್ಟ ಇಂದಿನ ಸಮಾಜಕ್ಕೆ ಮಾರ್ಗವನ್ನು ತೋರಿಸಬಲ್ಲವು. ಈ ಬಗೆಯ ಸಂವಾದ ಸಮಕಾಲೀನ ಬೌದ್ಧತತ್ವಗಳ ಬೇರೊಂದು ಆಯಾಮಗಳನ್ನು ಅನಾವರಣ ಮಾಡುತ್ತದೆ. ವಾಸ್ತವವಾಗಿ ವಿಮಲನ ಉತ್ತರಗಳಲ್ಲಿ ಜ್ಞಾನಕ್ಕೆ ಇರುವ ಅಹಂನಿರಸನತೆಯ ಜೊತೆಗೆ ಜ್ಞಾನ, ಸಮಾಜವನ್ನು ರೂಪಿಸುವ ತವಕವನ್ನು ಅಭಿವ್ಯಕ್ತಿಸುತ್ತದೆ. ಸಾರೀಪುತ್ತ ಬುದ್ಧನಷ್ಟೇ ಜ್ಞಾನವನ್ನು ಪಡೆದವನಾದರೂ ಮಾನಸಿಕವಾಗಿ ತಿಳಿಯಾಗಿಲ್ಲ; ಮತ್ತೇನೋ ಹುಡುಕುವ ಹಾದಿಯಲ್ಲಿ ಇರುವ ಸಾರೀಪುತ್ತ ವಿಮಲನ ಉತ್ತರಗಳಿಂದ ಭಿನ್ನ ಆಲೋಚನೆಗಳನ್ನು ಕಂಡುಕೊಳ್ಳುವ ಹಾದಿಯಲ್ಲಿದ್ದಾನೆ. ಇವರೆಲ್ಲಾ ದಿನನಿತ್ಯದ ಸಂಗತಿಗಳಿಗೆ 'ನಡೆಯ' ಸ್ವರೂಪವನ್ನು, ಧರ್ಮದ ದಾರಿಗಳನ್ನು, ಸುಖ–ದುಃಖ, ಶಾಂತಿಗಳನ್ನು ಹೇಗೆ ಸೇರಿಸಬಲ್ಲರು ಎಂಬುದಕ್ಕೂ ಇವುಗಳಿಗೆ ವಿಮಲಕೀರ್ತಿ ತೋರಿಸುವ ಮಾರ್ಗಗಳಿಗೂ ಅನಂತ ವ್ಯತ್ಯಾಸಗಳಿವೆ. ನಿರ್ದೇಶಸೂತ್ರದಲ್ಲಿ ವಿಮಲಕೀರ್ತಿಯ ಹೆಸರು ಕೇಳುವುದೇ ರೋಮಾಂಚನ. ಇಲ್ಲಿ ಅವನ ಅನಾರೋಗ್ಯವೇ ದೊಡ್ಡ ರೂಪಕ. ರೋಗವೆಂಬುದು ಬದುಕಿನ ಮಾರ್ಗವಾಗಿ ಕಂಡರೂ, ಅಂತಿಮವಾಗಿ ಇದೇ ತಾತ್ವಿಕ ಜಿಜ್ಞಾಸೆಯ ಆತ್ಯಂತಿಕ ಹಂತಕ್ಕೆ ಮುಟ್ಟುತ್ತದೆ. ಯಾವುದೇ ತತ್ವಗಳು ಅಂತಿಮವಾಗಿ ಸರಳ ಚೌಕಟ್ಟಿನ ಆವರಣಕ್ಕೆ ಬರಬೇಕು. ಹಾಗೆ ಬರದೇ ಹೋದರೆ ಅವು ಒಣ ಚರ್ಚೆಯಾಗಿ ಕೇವಲ ಬೂದಿಮಯವಾಗುತ್ತವೆ ಎಂಬುದು ವಿಮಲನ ವಾದವಾಗಿದೆ. ದ್ವಂದ್ವವನ್ನು ಸರಳರೇಖೆಗೆ ತರುವ ವಿಮಲಕೀರ್ತಿ ಸಂಸಾರದಲ್ಲಿದ್ದೂ ನಿತ್ಯಾಜ್ಞಾನಿ. ಕನ್ನಡ ಜಗತ್ತಿನ ಪ್ರಖರ ಬೆಳಕಾಗಿರುವ 'ಶೂನ್ಯಸಂಪಾದನೆ'ಯಲ್ಲಿ ಅಲ್ಲಮ ಈ ಬಗೆಯ ದೊಡ್ಡ ನಿತ್ಯಜ್ಞಾನಿ. ನಿತ್ಯಜ್ಞಾನಿಯಾದವನನಿಗೆ ದ್ವಂದ್ವಕ್ಕಿಂತ ಲೋಕವನ್ನು ಅರ್ಥಮಾಡಿಕೊಳ್ಳುವುದು ಮತ್ತು ಲೋಕವನ್ನು ಅರ್ಥೈಸುವುದರಲ್ಲಿ ಹೆಚ್ಚು ಆಸಕ್ತಿ. ಈ ಹಾದಿಯಲ್ಲಿ ಇದ್ದವನಿಗೆ, ಬೇಧ, ಜಾತಿ, ಆಹಾರ, ಯಾವ ಬಗೆಯ ಅಸಾಮಾನತೆಗಳ ಬಗ್ಗೆ ಯೋಚಿಸುವುದೂ ಇಲ್ಲ. ಇದ್ದರೂ ಅವುಗಳನ್ನು 'ಅಹಂ' ಚೌಕಟ್ಟಿನಲ್ಲಿಟ್ಟು ದೂರಮಾಡುತ್ತಾನೆ. ಇಂಥ ಜಾಗಗಳಲ್ಲಿ ವಿಮಲಕೀರ್ತಿ ಮತ್ತಷ್ಟು ಹತ್ತಿರವಾಗುತ್ತಾನೆ. 'ಸಕಲ ಜೀವಿಗಳ ದುಃಖವನ್ನು ನಿವಾರಿಸುವುದು ಹಾಗೂ ಎಲ್ಲ ಜೀವಿಗಳ ಸಂತಸದಿಂದಿರುವ ಲೋಕವನ್ನು ಕಟ್ಟುವುದೇ' ನಿರ್ದೇಶ ಸೂತ್ರದ

ಪ್ರಮುಖ ನಿಲುವು. ಈ ಅನುಭವವನ್ನು ಪಡೆದುಕೊಳ್ಳುವುದಕ್ಕೆ ವಿಮಲಕೀರ್ತಿ ಯಾವ ಜಪ-ತಪಗಳನ್ನು ಮಾಡಲಾರ. ಆದರೂ, ಬುದ್ಧನ ತತ್ವಗಳನ್ನು ಲೌಕಿಕ ಚೌಕಟ್ಟಿನಲ್ಲಿ ಅಭಿವ್ಯಕ್ತಿಸುತ್ತಾನೆ. ಈ ಸಂವಾದವನ್ನು ಕೇಳುವುದೇ ಒಂದು ಸೊಗಸು. ಕನ್ನಡ 'ಶೂನ್ಯ ಸಂಪಾದನೆ'ಯ ಅನೇಕ ಮಾತುಕತೆಗಳು ನೆನಪಾಗುತ್ತಾ ಸಾಗುತ್ತವೆ. ನುಡಿ ಮತ್ತು ಅರಿವುಗಳ ಅದ್ವೈತ ಸ್ಥಿತಿಯನ್ನು ಅಲ್ಲಮನ ರೀತಿಯಲ್ಲಿ ಅಲ್ಲದಿದ್ದರೂ, ವಿಮಲಕೀರ್ತಿ ನಿತ್ಯದ ಹಂಗಿನಲ್ಲಿ ಹುಡುಕಾಡಿದ್ದ ಅನಿಸುತ್ತದೆ. ಹಾಗೆ ನೋಡಿದರೇ ನಿರ್ದೇಶ ಸೂತ್ರ ಆರಂಭವಾಗುವುದೇ ವಿಮಲಕೀರ್ತಿಯ ಅನಾರೋಗ್ಯ ನಿಮಿತ್ತದ ಹಿನ್ನಲೆಯಲ್ಲಿ. ಆದರೆ, ಬುದ್ದನಿಗಿಂತ ಆತನ ಶಿಷ್ಯರು ವಿಮಲಕೀರ್ತಿಯ ಜೊತೆ ಸಂವಾದ ಮಾಡಿ ಕಲಿತಿದ್ದಾರೆ. ಈ ಲೋಕ ಸಂವಾದವನ್ನು ತಿಳಿಯುವುದೇ ಶಿಷ್ಯರಿಂದ. ವಿಮಲನ ಒಡಲು ಒಂದು ರೀತಿಯಲ್ಲಿ ಅಲ್ಲಮ ಹೇಳುವ ಹಾಗೆ 'ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ ಬಲ್ಲ' ಎನ್ನವಂತಾಗಿದೆ. ಬುದ್ಧ ನನ್ನನ್ನು ಮಾತನಾಡಿಸಲು ಬರಲಿಲ್ಲ ಎಂಬ ಅರಿವು ಕೂಡ ಈಗಾಗಲೇ ಬುದ್ಧನಿಗೆ ತಿಳಿದುಹೋಗಿದೆ. ಇದೊಂದು 'ಅರಿವಿನಾಟ' ಎಂದು ಭಾವಿಸಬಹುದು. ಈ ಅರಿವಿನಾಟದಲ್ಲಿ ಸೋಲು-ಗೆಲುವುಗಳು ಮುಖ್ಯವಾಗದೇ, ಲೋಕವನ್ನು ಅರಿಯುವುದೇ ಆಗಿದೆ. ಇವರೆಲ್ಲರ ಸಂವಾದದ ಅಂತಿಮ ಫಲಿತ ಅಲ್ಲಮನೇ ಹೇಳುವ ಹಾಗೆ 'ಎಣ್ಣೆ ಬೇರೆ, ಬತ್ತಿ ಬೇರೆ; ಎರಡೂ ಕೂಡಿ ಸೊಡರಾಯಿತ್ತು'. ಅಂತಿಮವಾಗಿ ಅರಿವಿನ ಜ್ಯೋತಿ ಮುಖ್ಯವಾಗುವುದು.

ವಿಮಲಕೀರ್ತಿ ನೀಡುವ ಉತ್ತರಗಳು ಬುದ್ಧಕಿವಿ ಕೇಳಿಸಿಕೊಳ್ಳುತ್ತಿದೆ ಅಷ್ಟೇ. ಆದರೆ, ಬುದ್ಧ ಅವುಗಳಿಂದ ಹೇಗೆ ಪ್ರೇರಿತಗೊಂಡ? ಅಂತಿಮವಾಗಿ ಆತನ ಪ್ರತಿಕ್ರಿಯೆ ಯಾವ ಮಟ್ಟದಲ್ಲಿತ್ತು ಎಂಬುದು ಅಸ್ಪಷ್ಟ. ಆದರೆ ಇಲ್ಲಿ ವಿಮಲಕೀರ್ತಿ ಬುದ್ಧನ ತತ್ವಗಳನ್ನು ಎದುರುಗೊಂಡು ಕೆಲವನ್ನು ಮತ್ತಷ್ಟು ವಿಸ್ತಾರಮಾಡಿ ತನ್ನದೇ ವ್ಯಾಖ್ಯಾನ ನೀಡಿದ್ದಾನೆ. ಇಲ್ಲಿ ಬುದ್ಧ ತತ್ವಗಳು ವಿಮಲನ ಕೈಯಲ್ಲಿ ಬೇರೊಂದು ಸ್ವರೂಪವನ್ನು ಧರಿಸಿವೆ. ಅರ್ಥಾತ್ ಬುದ್ಧನ ಅನುಯಾಯಿಗಳು ಅರ್ಥಮಾಡಿಕೊಂಡ ರೀತಿಗೂ ವಿಮಲನ ವಿವರಣೆಗೂ ವ್ಯತ್ಯಾಸಗಳಂತೂ ದಟ್ಟವಾಗಿವೆ. ಧ್ಯಾನ ಮತ್ತು ತಪಸ್ಸು ಏಕವೇ ಎಂಬ ಪ್ರಶ್ನೆ ನಮ್ಮಲ್ಲಿ ಮೂಡುತ್ತದೆ. ಆದರೆ, ಬೌದ್ಧ ಪರಂಪರೆಯಲ್ಲಿ ಧ್ಯಾನಕ್ಕೆ ಹಲ ಬಗೆಯ ಧಾರೆಗಳಿವೆ. ಸಾರಿಪುತ್ತ ಧ್ಯಾನವನ್ನು ಸಂಕೀರ್ಣ ಸ್ಥಿತಿಯಲ್ಲಿ ವಿವರಿಸಿದಾಗ, ವಿಮಲ ಅದನ್ನು ನಿರಾಕ-ರಿಸುತ್ತಾನೆ. ಸಾರಿಪುತ್ತನಿಗೆ ಧ್ಯಾನ ಒಂದು ಮನಸ್ಥಿತಿ; ಮನಸ್ಸಿಗೂ ಧ್ಯಾನಕ್ಕೂ ಸಂಬಂಧ ಸೂಚಿಸುತ್ತಾನೆ. ಇಲ್ಲಿ ವಿಮಲ ಧ್ಯಾನವನ್ನು ನಿತ್ಯ ಜ್ಞಾನದ ಆವರಣಕ್ಕೆ ತರಬಲ್ಲ. ಅದನ್ನು 'ವ್ಯಕ್ತಿತ್ವ'ಕ್ಕೆ ಕೊಂಡಿಯಾಗಿಸಬಲ್ಲ. ಬದಲಾಗಿ 'ತನ್ನ ತಾ ಅರಿತರೆ'

ಅದೇ ಧ್ಯಾನ ಎನ್ನುತ್ತಾನೆ. ಇದೇ ಹಾದಿಯಲ್ಲಿ 'ನಿರ್ವಾಣವನ್ನು' ಪಡೆಯಬಹುದು ಎಂಬುದು ಆತನ ಅಭಿಮತ. ಈ ವಾದ ಸಾಮಾನ್ಯ ಬದುಕಿಗೆ ಪೂರ್ಣತೆಯ ತೇಜವನ್ನು ನೀಡುವ ಬಗೆಯನ್ನು ತೋರಿಸುತ್ತದೆ. ವರ್ತಮಾನದಲ್ಲಿ ಧ್ಯಾನವಾಗಲೀ, ಧರ್ಮವಾಗಲೀ ಧರಿಸಿರುವ ಅರ್ಥಗಳನ್ನು ಗಮನಿಸಿದರೇ ವಿಮಲಕೀರ್ತಿ ಮಾತುಗಳು ಅವುಗಳಿಗೆ ತಕ್ಕೆ ಚಿಕಿತ್ಸಕ ಗುಣವನ್ನು ನೀಡುತ್ತಾನೆ. ಧರ್ಮಕ್ಕೆ ಅನೇಕ ತರದ ವ್ಯಾಖ್ಯಾನಗಳು ಲಭ್ಯವಿವೆ. ವಿಮಲಕೀರ್ತಿ 'ಧರ್ಮಕ್ಕೆ ನಿಶ್ಚಿತ ರೂಪ ಇಲ್ಲ, ಸಿದ್ಧಾಂತಗಳಿಲ್ಲ; ಅನುಭವಗಳ ಆಧಾರದಲ್ಲಿ ಅರಿಯಬಹುದು' ಎಂದು ಹೇಳುವನು. ಹಿಂಸಾತ್ಮಕ ರೂಪವನ್ನು, ನಿರ್ದಿಷ್ಟ ಅರ್ಥಗಳ ವಿವರಣೆಯನ್ನು; ತಾರತಮ್ಯ ಸ್ಥಿತಿಯನ್ನು ವಿಮಲ ಈ ಹಿನ್ನಲೆಯಲ್ಲಿ ತೀವ್ರವಾಗಿ ವಿರೋಧಿಸಿದಂತೆ ಕಾಣುತ್ತದೆ. ಬಸವಣ್ಣ ಧರ್ಮಕ್ಕೆ ದಯೆಯನ್ನು ಸೇರಿಸುತ್ತಾನೆ. ಬಹುಶಃ ಇದೂ ಕೂಡ ಬುದ್ಧನ ದಾರಿಯದೇ. ಆದರೆ, ವಿಮಲ, ಧರ್ಮ ವಿವರಣೆಯ ಚೌಕಟ್ಟಿಗೆ ಬರುವುದನ್ನು ನಿರಾಕರಿಸುತ್ತಾನೆ. ಅನುಭವದ ಮೇಲೆ ಧರ್ಮ ಸಿಗುತ್ತದೆ ಎಂದು ಹೇಳಿದರೂ; ಬುದ್ಧನ ಹಾದಿಯನ್ನು ಒಪ್ಪಿಕೊಂಡಂತೆ. ಯಾವುದೇ ಅನುಭವ. ನಡತೆ ಅಥವಾ ಇಂದ್ರಿಯಗಳಿಗೆ ಹೊರತಲ್ಲ. ಯಾವುದಕ್ಕೂ ಸ್ವಭಾವವಿಲ್ಲ ಎಂದೂ ಹೇಳುವಾಗಲೂ 'ಮೌನ'ವೂ ಸ್ವಭಾವದ ಜಾಗಕ್ಕೆ ನಿಲ್ಲುತ್ತದೆ. ಈ ಮಾತನ್ನು ಹೇಳಲು ಕಾರಣ ವಿಮಲಕೀರ್ತಿ ಮಹಾಯಾನಿ ಎಂದು ಗೋಚರಿಸುತ್ತಲೇ ತನ್ನ ನಿಲುವುಗಳನ್ನು ಬದಲಿಸಿಕೊಳ್ಳುವ ಹಾದಿಯನ್ನು ಹಲವು ಸಲ ಮಾಡುತ್ತಾನೆ. ಹಾಗೆ ಕಂಡರೂ ತಟಕ್ಕನೆ ಭಿನ್ನ ಸ್ವರೂಪದಲ್ಲಿ ಮತ್ತೆ ಅದೇ ಆವರಣಕ್ಕೆ ತಲುಪುತ್ತಾನೆ. ಆದರೆ, ನೀಡುವ ಉತ್ತರಗಳ ರೂಪ ಅನ್ಯ ಎನಿಸುತ್ತದೆ. 'ಭಿಕ್ಕೆ ಬೇಡುವ ಪ್ರತಿ ಮನೆಯೂ ಬುದ್ಧಗುರುವಿನ ಮನೆಯಂದೇ ಭಾವಿಸಬೇಕು' ಎಂದಾಗ ಬುದ್ದ ಹಾದಿಗೆ ಗೊತ್ತಿಲ್ಲದಂತೆ ವಾಪಸ್ಸಾಗುತ್ತಾನೆ. ಆದರೆ, ಈತನ ಸ್ವಂತಿಕೆ ಅಡಗಿರುವುದು ದ್ವಂದ್ವವಾದವನ್ನು ಸ್ಪಷ್ಟಗೊಳಿಸುವುದರಲ್ಲಿ. ಮುಂದೆ ಬರುವ ಸಂವಾದದ ಫಲಿತವೇ ಇದಾಗಿದೆ. ಜ್ಞಾನ, ಜ್ಞಾನೋದಯ, ಭಾಷೆ, ಪದಗಳು ಇತ್ಯಾದಿ ಪರಿಕಲ್ಪನೆಗಳ ಕು–ರಿತು ವಿಮಲಕೀರ್ತಿ ನಡೆಸುವ ಮಾತು–ಕತೆ ತೀವ್ರವಾಗಿದೆ. ಜ್ಞಾನ ಇರುವುದೋ? ಆಗುವುದೋ ಅಥವಾ ಆಗುತ್ತಿರುವುದೋ? ಎಂಬ ಪ್ರಶ್ನೆಗಳು ವೇದಾಂತ ಮತ್ತು ಬೌದ್ಧ ನೆಲೆಗಳು ಸಾಕಷ್ಟು ಕೇಳಿಕೊಂಡಿವೆ. ಆದರೆ, ಯಾವುದೇ ತತ್ವ ಪರಿಭಾಷೆ ಅನುಭವದ ಚೌಕಟ್ಟಿಗೆ, ದೈನಂದಿನ ಲಯಕ್ಕೆ ಒಗ್ಗಿಕೊಳ್ಳದೇ ಹೋದರೆ ಅಂತಿಮವಾಗಿ ನಿರ್ಲಿಪ್ತ ಸ್ಥಿತಿ ಬರಬಲ್ಲದು. ವಿಮಲನ ಮಾತುಗಳ ಬೆನ್ನಲ್ಲಿ ಇದೇ ತಾತ್ವಿಕತೆ ಅಡಗಿದೆ. 'ಜ್ಞಾನಿಗಳು ಪದಗಳಿಗೆ ಅಂಟಿಕೊಂಡಿಲ್ಲ ಎಲ್ಲಾ ವಸ್ತುಗಳ ಉದ್ದೇಶ ಬಿಡುಗಡೆ ಆದುದರಿಂದ ಭಾಷೆಯು ಮುಕ್ತ' ಎಂಬ ಮಾತನ್ನೇ ತೆಗೆದುಕೊಂಡರೂ

ತಿಳಿದೀತು. ಅನುಭಾವಿಗೆ ಭಾಷೆ ಕೊಡುವ ಸಂಕಟವನ್ನು ತಿಳಿದಿದ್ದೇವೆ. ಅಲ್ಲಮ 'ಭಾಷೆ ಎಂಬುದು ಸೂತಕ' ಎಂದು ಹೇಳುತ್ತಾನೆ. ಬೌದ್ಧರಿಗೆ ಅದು ಲೋಕಾರೂಢಿ. ಬಹುಶಃ ವಿಮಲನೂ ಕೂಡ ಭಾಷೆಯು ಮುಕ್ತ ಎನ್ನುವುದು ಇದೇ ಅರ್ಥದಲ್ಲಿ ಅನಿಸುತ್ತದೆ. ಜ್ಞಾನಿ ಪದಗಳಿಗೆ ಅಂಟಿಕೊಂಡಿಲ್ಲ ಎಂದರೆ, ಭಾಷೆಗಿಂತ ಮನಸ್ಸು ದೊಡ್ಡದೆಂದು ಭಾವಿಸದಂತಿದೆ. ಬುದ್ಧನಿಗೂ ಕೂಡ ಭಾಷೆಯನ್ನು ಬಂಧನಕ್ಕಿಂತ ಬಯಲಿಗೆ ಬಿಡುವುದರಲ್ಲೇ ಆಸಕ್ತಿ. ಹಾಗೆ ಬಿಟ್ಟಾಗ ಅದು ಎಲ್ಲರ ಸ್ವತ್ತು ಆಗಬಹುದು. ಎಲ್ಲ ಪದಗಳು ಎಲ್ಲಾ ವಸ್ತುಗಳಿಗೂ ನಂಟು ಹೊಂದಿರುತ್ತದೆ. ಭಾಷೆಯನ್ನು ದಾರ್ಶನಿಕತೆಗೆ ಒಗ್ಗಿಸುವುದು ಕಠಿಣವೆಂದು ವಿಮಲ ಬಾವಿಸಿದಂತಿಲ್ಲ. ಭಾಷೆಯ ಉನ್ಮತ್ತ ಸ್ಥಿತಿ ಕಾವ್ಯ ಎಂದು ಭಾವಿಸಿದರೇ, ಅದು ಹೊರಡಿಸುವ ದರ್ಶನಕ್ಕೂ, ತತ್ವಜ್ಞಾನ ಹೊರಡಿಸುವ ದರ್ಶನಕ್ಕೂ ವ್ಯತ್ಯಾಸಗಳಿರಬಹುದು. ಕನ್ನಡದ ಸಂದರ್ಭದಲ್ಲಿ ಪಂಪ ಕಾವ್ಯ ನೀಡುವ ಅನುಭವ ಜಗತ್ತನ್ನು ಮತ್ತು ದರ್ಶನ ನೀಡುವ ಅನುಭವನ್ನು ಮುಖಾಮುಖಿಯಾಗಿಸಿದ. ವಿಮಲ ದೈನಂದಿನ ವಲಯದಲ್ಲಿ ಯಾವುದೆಲ್ಲಾ ಭ್ರಮೆಯೋ? ಅಸಾಧ್ಯವೋ ಅದನ್ನು ನಿಸರ್ಗದ ಪ್ರತಿಮೆಗಳನ್ನು ಬಳಸಿ ವಿವರಣೆ ನೀಡುತ್ತಾನೆ. 'ಬೆಳಕಿನ ಹುಳುವಿಗೆ ಸೂರ್ಯನ ತೇಜಸ್ಸನ್ನು ತೋರಿಸಿ ಗೊಂದಲಕ್ಕೀಡು ಮಾಡಬೇಡಿ' ಎಂಬ ನುಡಿ ಇದನ್ನೇ ತೋ–ರಿಸುತ್ತದೆ. ಇವನ ಆತ್ಯಂತಿಕ ಉದ್ದೇಶ ದೈನಂದಿನ ಲಯದಲ್ಲಿ ಎಲ್ಲವೂ ಸಾಧನೆಯ ಮಟ್ಟಕ್ಕೆ ಬರಬಲ್ಲವು; ಆದರೆ, ದಾರಿಗಳು ದ್ವಂದ್ವವಾಗಿರಬಾರದು. ಜ್ಞಾನೋದಯ ಎನ್ನುವುದು ಎಲ್ಲಿಂದಲೋ ಬರುವುದಲ್ಲ ಬದಲಿಗೆ ಅದು 'ಸಕಾರಾತ್ಮಕ ನೆಲೆ' ಎನ್ನುತ್ತಾನೆ. ಜ್ಞಾನೋದಯವನ್ನು ಮುಕ್ತಸ್ಥಿತಿಗೆ ಹೋಲಿಸುತ್ತಾನೆ. ತಾರತಮ್ಯಗಳಿಂದ ದಾಟಿಕೊಳ್ಳುವುದೇ ನಿಜವಾದ ಜ್ಞಾನ ಎಂಬುದು ಆತನ ನಿಲುವು.

ವೈರಾಗ್ಯ ಭಾರತೀಯ ದರ್ಶನಗಳಲ್ಲಿ ತನ್ನದೇ ಸ್ಥಾನ ಪಡೆದುಕೊಂಡಿದೆ. ಜೈನರಲ್ಲಿ ಇದು ದೊಡ್ಡ ಪರಿಕಲ್ಪನೆ. ಸನ್ಯಾಸತ್ವ, ಅವಧೂತತನ, ಇವೆಲ್ಲೆ ಒಂದೇ ರೇಖೆಯಲ್ಲಿ ಬರಬಲ್ಲವು. ಜೈನ ಮತ್ತು ಬೌದ್ಧರಲ್ಲಿ ವೈರಾಗ್ಯವಿಲ್ಲದೇ ಬಂಧನಗಳಿಂದ ಹೊರಬರುವುದು ಅಸಾಧ್ಯ. ಅರ್ಥಾತ್ ಜ್ಞಾನವನ್ನು ದಕ್ಕಿಸಿಕೊಳ್ಳುವುದಕ್ಕೂ ವೈರಾಗ್ಯವನ್ನು ಪಡೆಯಬೇಕು. ಆದರೆ, ವಿಮಲ ಇದನ್ನು ನಿರಾಕರಿಸುತ್ತಾನೆ. ಮನುಷ್ಯನೊಬ್ಬ ನಿರ್ಮೋಹದ ಸ್ಥಿತಿಯನ್ನು ಪಡೆದರೆ ಸಾಕು ಎನ್ನುತ್ತಾನೆ. ಇವನ ಪಾಲಿಗೆ ದೇಹ ದಂಡನೆ ನಿರರ್ಥಕ. ಬುದ್ಧನ ಬಯಕೆಗಳ ನಾಶದ ಸ್ಥಿತಿಗೂ, ವಿಮಲನ ನಿರ್ಮೋಹ ಸ್ಥಿತಿಗೂ ಹತ್ತಿರವಿದ್ದರೂ, ವಿಮಲಕೀರ್ತಿ ವೈರಾಗ್ಯ, ಬದುಕಿನ ದೊಡ್ಡ ಸಾಧನೆ ಎಂದು ಒಪ್ಪಲಾರ. ಈತನ 'ನಿರ್ದೇಶ ಸೂತ್ರ'ಕ್ಕೆ ಎರಡು ತತ್ವದ ತುದಿಗಳಿವೆ ಎಂದು ಭಾವಿಸಿದರೆ, ಒಂದು ಬುದ್ಧನ ಶಿಷ್ಯರು ನಡೆಸುವ ಭಾಗ.

ಎರಡು; ಮಂಜುಶ್ರೀ ಒಬ್ಬನೇ ನಡೆಸುವ ಸಂವಾದ. ಹರವೆ ಅವರೇ ಹೇಳುವ ಹಾಗೆ ಇದು ಅರಿವು ಮತ್ತು ಪ್ರಜ್ಞೆಗಳ ನಡುವೆ ನಡೆದ ಸಂವಾದ. ಇಲ್ಲಿಯ ತನಕ ಜರುಗುವ ಮಾತುಕತೆ ಒಂದು ದಿಕ್ಕಿನದಾದರೇ, ಮಂಜುಶ್ರೀ ಪ್ರವೇಶ ಮಾಡಿದ ಮೇಲೆ ಸಾಗುವ ಸಂವಾದ ಮತ್ತೊಂದು ದಿಕ್ಕಿನದು. ಹಿಂದೆ ಪ್ರಸ್ತಾಪಿಸಿದ ಹಾಗೆ 'ದ್ವಂದ್ವವಾದ' ದ ಬಿಕ್ಕಟ್ಟುಗಳು, ಅದರ ಸಿಕ್ಕುಗಳನ್ನು ಬಿಡಿಸುವ ದಾರಿಗಳು ಇಲ್ಲಿ ಚರ್ಚೆಗೆ ಒಳಗಾಗಿವೆ. ಒಳಗಣ್ಣು, ಒಳಗಿವಿಗಳು ಇಲ್ಲಿ ಎಚ್ಚರದ ಸ್ಥಿತಿಯನ್ನು ಮುಟ್ಟುತ್ತವೆ. ಮತ್ತೊಮ್ಮೆ ವಿಮಲಕೀರ್ತಿ ತನ್ನನ್ನು ತಾನು ಕಂಡುಕೊಳ್ಳುವ ಮಾರ್ಗವನ್ನು ನೋಡಬಹುದು. ಏಕೆಂದರೆ, ತನಗೆ ಅನಾರೋಗ್ಯ ಇದೆ ಎಂದು ಒಪ್ಪಿಕೊಂಡವನು. ಆದರೆ, ಮಂಜುಶ್ರೀಯ ಬಳಿ ಕಾಯಿಲೆ ಮೂಲಕ ದೇಹದ ಅಸ್ತಿತ್ವ ಕುರಿತು ನುಡಿಯುತ್ತಾನೆ. ಇಬ್ಬರು ಜ್ಞಾನಿಗಳು ನಡೆಸುವ ಮಾತುಕತೆ ಹೇಗಿರಬಹುದು ಎಂಬುದಕ್ಕೆ ದೊಡ್ಡ ನಿದರ್ಶನವಿದು. ದೇಹ, ಕಾಯಿಲೆ, ಬೋಧಿಸತ್ವ, ಸುಖ, ಶಾಂತಿ, ಸ್ವಾರ್ಥ, ದುಃಖ ಮುಂತಾದವು ವಿಮಲಕೀರ್ತಿಯ ನುಡಿಯಲ್ಲಿ ಬೇರೊಂದು ಸ್ವರೂಪವನ್ನು ಧ–ರಿಸುವ ಹಾದಿಗೆ ಮರಳುತ್ತವೆ. ಯಾವುದೇ ಜ್ಞಾನಿಗೆ ದೊಡ್ಡ ಸವಾಲು ಇರುವುದೇ ಇಲ್ಲಿ. ಹೀಗಾಗಲೇ ಬೌದ್ಧ ವಲಯದಲ್ಲಿ ಸಾಕಷ್ಟು ಪರೀಕ್ಷೆಗೆ ಒಳಗಾಗಿರುವ ಮೇಲಿನ ಭಾವಗಳು ತನ್ನ ಅನುಭವದ ಬೆಳಕಿನಲ್ಲಿ ವಿವರಿಸಿಬೇಕಾಗುತ್ತದೆ. ವೇದಪೂರ್ವ ಕೆಲ ಭಾಗಗಳನ್ನು ಕರ್ಮಕಾಂಡವೆಂದು, ಉಪನಿಷತ್ತುಗಳನ್ನು ಜ್ಞಾನಕಾಂಡಗಳೆಂದು ಕರೆಯುವುದು ರೂಢಿ. ಕರ್ಮಕ್ಕಿಂತ ಜ್ಞಾನದಲ್ಲಿ ಹೆಚ್ಚು ಚರ್ಚೆಯ ಭಾಗಗಳಿವೆ. ಬ್ರಹ್ಮ ಎಂದರೇ ಆನಂದ ಎಂದು ಭಾವಿಸುವ ವಿಚಾರಗಳು ಅಲ್ಲಿವೆ. ದೇಹ ಮತ್ತು ಆತ್ಮ ಅಭಿನ್ನ ಎಂದು ಹೇಳುವ ಅಂಶಗಳು ಇವೆ. ಆದರೆ ಗಮನಿಸಬೇಕಾದ ಅಂಶವೆಂದರೆ ವಿಮಲಕೀರ್ತಿ ಮತ್ತು ಮಂಜುಶ್ರೀಯರ ನಡುವೆ ನಡೆಯುವ ಸಂವಾದವು ಮನಸ್ಸಿನ ಮೂಲಭೂತ ಸ್ಥಿತಿಗಳ ಕಡೆಗೆ ಸಾಗುತ್ತದೆ. ಕಾಯಿಲೆ ಮಾನಸಿಕವೊ? ದೈಹಿಕವೋ? ಎಂಬ ಪ್ರಶ್ನೆಗಳು ಇಲ್ಲಿ ನುಗ್ಗುತ್ತವೆ. 'ದೇಹಕ್ಕೆ ಸ್ವಂತ ವಿವೇಚನೆ ಇಲ್ಲ' ಎನ್ನುವುದೇ ವಿಮಲನ ಅಭಿಮತ. ಹಾಗಾಗಿ ಅದು ಭೌತಿಕವಲ್ಲ. ಮಾನಸಿಕವೂ ಅಲ್ಲ. ದೇಹವು ಇತರ ಜೀವಿಗಳ ಒಳತಿಗಾಗಿ ನಿಸ್ವಾರ್ಥವಾಗಿದೆ ಎನ್ನುತ್ತಾನೆ. ಇದೊಂದು ನಿದರ್ಶನವಷ್ಟೆ. ಆತನ ಮಾತುಗಳನ್ನು ಹೇಗಾದರೂ ಸ್ವೀಕರಿಸಿ, ಆದರೆ ಖಚಿತತೆಯನ್ನು ನೋಡಬಹುದು. ದೇಹ ಮತ್ತು ಪ್ರಜ್ಞೆಗಳಿಂದ ಲೋಕವನ್ನು ಅರಿಯುವುದು ಒಂದು ವಿಧಾನವಾದರೆ, ಅವುಗಳ ದ್ವಂದ್ವವನ್ನು ಮೀರುವ ಪ್ರಕ್ರಿಯೆ ಮತ್ತೊಂದು ಬಗೆ. ಬಹುಶಃ ಇಬ್ಬರೂ ಎರಡೂ ತುದಿಗಳನ್ನು ಮುಟ್ಟುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರ ವಾದಗಳ ನಡುವೆ ತತ್ವಜ್ಞಾನ ಮನುಷ್ಯಕೇಂದ್ರಿತವೋ? ಪ್ರಜ್ಞಾನೆಲೆಯದೋ? ಅರಿವಿನ ಗರ್ಭದ್ದೋ?

ಲೋಕಕೇಂದ್ರಿತವೋ ಇತ್ಯಾದಿ ಪ್ರಶ್ನೆಗಳಂತೂ ಮೂಡುತ್ತವೆ. ಆದರೆ, ಇಲ್ಲಿ ಅರ್ಥವಾಗುವುದು ಮನುಷ್ಯನ ಮೂಲಕವೇ ಎಲ್ಲವನ್ನು ಗ್ರಹಿಸಬೇಕೆಂಬುದು. ಜ್ಞಾನ ಮತ್ತು ಅನುಭಾವಕ್ಕೆ ರೋಗವೆಂಬುದು ರೂಪಕವಷ್ಟೇ. ಮಂಟೇಸ್ವಾಮಿಯ ರೋಗ ಬಸವಣ್ಣನಿಗೆ ಲೋಕದರಿವಿನ ಹೆಬ್ಬಾಗಿಲನ್ನು ತೆರೆಯುವಂತೆ ಮಾಡುತ್ತದೆ. ಹಾಗೆಯೆ ವಿಮಲಕೀರ್ತಿಯ ರೋಗದ ವ್ಯಾಖ್ಯನಗಳು ಇತರ ಬೋಧಿಸತ್ವ–ರಿಗೆ 'ದೈನಂದಿನ' ಬದುಕಿಗೂ, ಬೋಧಿಸತ್ವನ ಅಂತರಂಗದ ನಿಲುವುಗಳಿಗೆ ಕೆಲ ಸೂಕ್ಷ್ಮತೆಗಳು ತಿಳಿಯುತ್ತವೆ. ಲೋಕದ ಸಂಗತಿಗಳು ಅರಿವಿನಾಚೆಗೆ ಇರಬಲ್ಲವೇ ಎಂಬುದು ವಿಮಲಕೀರ್ತಿಗೆ ಎದುರಾಗುವ ಪ್ರಶ್ನೆ. ಹಾಗಾಗಿಯೇ ಸಂಬಂಧಗಳನ್ನು ಅರಿವಿನ ಚೌಕಟ್ಟಿಗೆ ತರಬಲ್ಲ. ಹುಟ್ಟು–ಸಾವುಗಳನ್ನು ತನ್ನನ್ನು ತಾನು ಅರಿತರೆ ದಾಟಬಹುದು ಎಂಬ ನಿಲುವು ದ್ವಂದ್ವವನ್ನು ಸ್ಪಷ್ಟಗೊಳಿಸುವುದರಲ್ಲಿದೆ. ದ್ವಂದ್ವಕ್ಕೆ ಪರಸ್ಪರ ಒಳಗೊಳ್ಳುವ ಕ್ರಿಯೆ ಪ್ರಾಪ್ತವಾಗಿದೆ ಅನಿಸುತ್ತದೆ. ಅದು ಎಂದಿಗೂ ಎರಡು ತೀಕ್ಷ್ಣ ಅಲಗುಗಳಿಂದ ಆವರಿಸಿಕೊಂಡಿರುತ್ತದೆ. ಒಂದನ್ನು ತಿಳಿಯದೆ, ಇನ್ನೊಂದನ್ನು ಅರಿಯುವುದು ಕಠಿಣ. ಅನೇಕ ಬೋಧಿಸತ್ವರು ದಂದ್ವವನ್ನು ದಾಟುವುದು ಹೇಗೆ? ಎಂಬುದಕ್ಕೆ ತಮ್ಮದೇ ಮಾತುಗಳನ್ನು ಸೇರಿಸುತ್ತಾರೆ. ಈ ಚರ್ಚೆಯೂ ನಿರ್ದೇಶಸೂತ್ರದ ಹೃದಯ ಭಾಗವೇ. ಜ್ಞಾನದ ಸ್ಥಿತಿಯನ್ನು ಅರಿಯಬೇಕಾದರೇ, ಮೊದಲು ಅಜ್ಞಾನದ ಸ್ವರೂಪವನ್ನು ಸರಿಯಾಗಿ ತಿಳಿಯಬೇಕು. ಈ ದೃಶ್ಯದಲ್ಲಿ ಎಂಥ ಸಾಮಾನ್ಯನೂ ಲೋಕ ಮತ್ತು ಮನುಷ್ಯ ಸಂಬಂಧಗಳ ಸಾಧ್ಯತೆಗಳನ್ನು ಅರಿಯಲು ಹಲವು ದಾರಿಗಳಿವೆ. ದ್ವಂದ್ವ ಎಂದಿಗೂ ಮನುಷ್ಯನ ಸಂಗಾತಿ. ಝೆನ್ ಪಂಥವೂ ಇದನ್ನು ಸಾಕಷ್ಟು ಎದುರುಗೊಂಡಿದೆ. ನಾನು–ನೀನು ಎಂಬದು ದಂದ್ವ. ಇದು ಅಳಿಯುವ ತನಕ ಯಾವ ದಾರಿಗಳು ಸಿಗಲಾರವು. ಆದರೆ, ಈ ಸೂತ್ರದಲ್ಲಿ ಆರಂಭದಲ್ಲಿ ಎರಡೂ ಪರೀಕ್ಷೆಗೆ ಒಳಗಾಗುತ್ತವೆ. ಅಂದರೆ, ಒಳಿತು ತಿಳಿಯಲು ಮೊದಲು ಕೆಡಕು ತಿಳಿಯಬೇಕು. ಅಂತಿಮ ಗಳಿಗೆಯಲ್ಲಿ ರೋಗ, ಮುಪ್ಪು ಮತ್ತು ಸಾವಿನ ಕುರಿತು ಆಗುವ ಮಾತು–ಕತೆಗಳಂತೂ ಭಿನ್ನ ಅನುಭವವನ್ನು ನೀಡಬಲ್ಲವು. ಮನುಷ್ಯ ಅಹಂಕಾರವನ್ನು ತ್ಯಜಿಸುವುದು; ತನ್ನನ್ನು ತಾನು ಅರಿಯುವುದು. ಈ ಎರಡು ತತ್ವಗಳು ವಿಮಲಕೀರ್ತಿಯ ವಾದದ ಆವರಣದಲ್ಲಿ ಬರುತ್ತವೆ. ಇವುಗಳನ್ನು ಅರಿಯಲು ಹುಟ್ಟು ಸಾವುಗಳನ್ನು ದಾಟಬೇಕು. ಕನ್ನಡದಲ್ಲಿ ಸಾವು ಮತ್ತು ದುಃಖದ ವಿವೇಚನೆಗೆ ಬಹುದೊಡ್ಡ ಸಂವಾದವೊಂದು ಕಾಣಲಾಗಿದೆ. ಅದು ಅಲ್ಲಮ ಮತ್ತು ಮುಕ್ತಾಯಕ್ಕಳ ಸಂವಾದ. ದುಃಖ ಸಾವಿನಿಂದ ಬರುವುದೋ? ಅಥವಾ ಅದರ ಅಸ್ಪಷತೆಯ ತಿಳಿವಳಿಕೆಯಿಂದ ಬರುವುದೋ? ಎಂಬುದುಕ್ಕೆ ದೊಡ್ಡ ನಿದರ್ಶನವದು. ಈ ಸಂವಾದದಲ್ಲಿ ವಿಮಲಕೀರ್ತಿಗಿಂತ ಭಿನ್ನವಾಗಿ ಅಲ್ಲಮ

ಗುರು, ದುಃಖ, ಸಾವು, ದ್ವಂದ್ವ, ದೇಹ ಮತ್ತು ತನ್ನನ್ನು ತಾನು ಅರಿಯುವುದು ಇತ್ಯಾದಿ ವಿಚಾರಗಳಲ್ಲಿ ಕಾಣಬಲ್ಲ.

ಸಂವಾದದ ಅಂತಿಮಗಳಿಗೆಯಲ್ಲಿ ಸೃಷ್ಟಿಸುವ ಅವತಾರಿ ಬೋಧಿಸತ್ವ, ಸುಗಂಧಕೂಟ, ಸುಗಂಧ ಪರಿಮಳ ಇತ್ಯಾದಿ ದಾರ್ಶನಿಕ ರೂಪಕಗಳು, ವಿಮಲಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೇರಿಸಿವೆ. ಇಲ್ಲಿ ಧರ್ಮ ಮತ್ತೊಮ್ಮೆ ಚರ್ಚೆಯಾಗುತ್ತದೆ. ಸುಗಂಧಕೂಟ ಶಬ್ದ ಮತ್ತು ಭಾಷೆಯ ಮೂಲಕ ಧರ್ಮವನ್ನು ಬೋಧಿಸುವುದಿಲ್ಲ, ಬದಲಿಗೆ ಸುಗಂಧ ಪರಿಮಳದ ಏಕಾಗ್ರತೆ ದಾರಿಯಲ್ಲಿ ಅರಿವನ್ನು ಪಡೆಯುವಂತೆ ಹೇಳುತ್ತಾನೆ. ಅರಿವನ್ನಾಗಲೀ ಗುರುವನ್ನಾಗಲೀ ದಕ್ಕಿಸಿಕೊಳ್ಳುವುದಕ್ಕೆ ಕೇವಲ ಭಾಷೆ ಸಾಕೇ? ಎಂಬ ಪ್ರಶ್ನೆ ತೀರಾ ಅನುಭಾವಿತನದ ಜಿಜ್ಞಾಸೆಯನ್ನು ಉಂಟುಮಾಡುತ್ತದೆ. ಅರಿವು ಮತ್ತು ಸಿದ್ಧಿಗಳನ್ನು ಸಾಧಿಸುವ ಪ್ರತಿ ಬೋಧಿಸತ್ವನಿಗೂ ಇದೊಂದು ಸವಾಲು. ಲೋಕದ ಕೊಳಕನ್ನು ನಿವಾರಿಸುವ ಮತ್ತು ಮನದ ಕೆಡಕನ್ನು ದೂರಮಾಡಿಕೊಳ್ಳುವ ಪರಿಯನ್ನು ವಿಮಲ ರೂಪಕ ದಾ–ರಿಯಲ್ಲಿ ಹಿಡಿದಿದ್ದಾನೆ. ಇಂಥ ಕಡೆ ಆತನ ಒಳ ತತ್ವಗಳು ಮನುಷ್ಯ ಮತ್ತು ಲೋಕ ಸಂಬಂಧದ ಕುರುಹುಗಳು ಧರಿಸುತ್ತವೆ. ಹಲವು ಬಾರಿ ಶಬ್ಧ ಬರಿ ಬುದ್ದಿಯ ವಸ್ತುವಾದಾಗ, ನಿಸರ್ಗವೇ ಮನಸ್ಸನ್ನು ಎಚ್ಚರಿಸುತ್ತದೆ. ಇದರ ಅಂತರಂಗವೇ ಆದ ಸುಗಂಧ ಪರಿಮಳ ಅರಿವಿನ ತಾರಕವನ್ನು ಮುಟ್ಟುವುದಕ್ಕೆ ಸಹಾಯಕವಾಗಬಹುದು. ಸುಗಂಧದ ರೂಪಕ ಲೋಕ ವಿಮಲಕೀರ್ತಿಯ ಬುದ್ಧಭೂಮಿ ಮತ್ತು ಶುದ್ಧ ಭೂಮಿಯಗಿದೆ. ಇದರಲ್ಲಿ ಬುದ್ಧನ ಸಕಲಜೀವಿಗಳ ಸಮಾನತೆಯ ತತ್ವವನ್ನು ಕಾಣಬಹುದು. ಮೇಲುನೋಟಕ್ಕೆ ಸುಗಂಧಲೋಕ ಸ್ವರ್ಗದ ಕಲ್ಪನೆಯನ್ನು ತೋರಬಹುದು. ಆದರೆ, ಜೀವಿ ಇಲ್ಲಿಗೆ ಮುಟ್ಟಿದ ಮೇಲೆ ಒಳಿತು–ಕೆಡುಕುಗಳ ದ್ವಂದ್ವವನ್ನು ಮೀರಬಲ್ಲ. ಬಹುಶಃ ಇದೇ ಅರಿವಿನ ಉತ್ತುಂಗದ ಸ್ಥಿತಿ. ಆತ್ಯಂತಿಕವಾಗಿ ಬುದ್ಧಲೋಕವನ್ನು ವಿಮಲಕೀರ್ತಿ ಸರಳತತ್ವದ ಮುಖೇನ ವಿಸ್ತರಿಸಿದ್ದಾನೆ. ಈತನ ನಿರ್ದೇಶ ಸೂತ್ರವನ್ನು ಸರಳ ದಾರ್ಶನಿಕತೆಯನ್ನು ಒಳಗೊಂಡ ಸಾಹಿತ್ಯ ಕೃತಿಯಂತೆ ಗ್ರಹಿಸಬಹುದು. ಹರವೆಯವರು ಸಂಗ್ರಹಿಸಿ ಅನುವಾದಿಸಿರುವ ಕನ್ನಡ ನಿರ್ದೇಶ ಸೂತ್ರವನ್ನು ಓದುವಾಗ, ಈ ಅನುಭವವಂತೂ ಖಂಡಿತ ದಕ್ಕಿಸಿಕೊಳ್ಳಬಹುದು. ನಡೆಗೆಟ್ಟ ಇಂದಿನ ಬದುಕಿಗೆ ವಿಮಲಕೀರ್ತಿ ಸಾಕಷ್ಟು ದಾರಿಗಳನ್ನು ತೋರಬಲ್ಲ. ಜೊತೆಗೆ ಆರೋಗ್ಯಕರ ಬೌದ್ಧಿಕ ಸಂವಾದವೇ ತುಂಡಾಗುತ್ತಿರುವ ಇಂದಿನ ಸಮಯದಲ್ಲಿ, ಇಲ್ಲಿನ ಮಾತು–ಕತೆಗಳು ಎಚ್ಚರಿಸಬಲ್ಲವು. ಬೌದ್ಧಿಕ ಆತ್ಮರತಿಗೆ ಇಲ್ಲಿನ ಸುಗಂಧ ನಮಗೆ ಪಾಠ ಕಲಿಸಲಿ. ವಿಮಲಕೀರ್ತಿಯ ಮೂಲಕ ನನ್ನನ್ನು ಹಲವು ಆಲೋಚನೆಗಳಿಗೆ ದೂಡಿದ ಹಿರಿಯ ಗೆಳೆಯರಾದ ಹರವೆಯವರಿಗೆ ಕೃತಜ್ಞತೆಗಳು.